# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಡಾ॥ ಕಾಂತರಾಜು, ವೈ.
ಎಂ.ಎಸ್.ಸಿ.(ಕೃಷಿ), ಪಿ.ಎಚ್.ಡಿ.
ಸಹ ಪ್ರಾಧ್ಯಾಪಕರು (ಸಸ್ಯ ರೋಗ ಶಾಸ್ತ್ರ) ಮತ್ತು
ಮುಖ್ಯಸ್ಥರು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ
**ಮೋ: 9448584749, 9148372760**

ಕಿ.ರಾ.ಚ.ತೋಟಗಾರಿಕೆ ಮಹಾವಿದ್ಯಾಲಯ
ಅರಭಾವಿ – 591 218, ತಾ॥ ಗೋಕಾಕ
ಜಿ॥ ಬೆಳಗಾವಿ, ಕರ್ನಾಟಕ
ಇಮೇಲ್: heeukrccha@gmail.com
kantharaju74@gmail.com

ಸಂ.ತೋವಿಶಿಘ/ಕಿರಾಚತೋಮ/540/2019-20

ದಿನಾಂಕ: 20.07.2019

ಇವರಿಗೆ,

ಡಾ. ಪ್ರಕಾಶ ಕಮ್ಮರಡಿ
ಮಾನ್ಯ ಅಧ್ಯಕ್ಷರು,
ಕರ್ನಾಟಕ ಕೃಷಿ ಬೆಲೆ ಆಯೋಗ
ಬೆಂಗಳೂರು

**(ಮೇಲಾಧಿಕಾರಿಗಳ ಮುಖಾಂತರ)**

ಮಾನ್ಯರೇ,

**ವಿಷಯ:** ಕರ್ನಾಟಕ ಕೃಷಿ ಬೆಲೆ ಆಯೋಗ ಪ್ರಾಯೋಜಿತ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಯೋಜನೆಯ ಪ್ರಗತಿ ವರದಿ ಸಲ್ಲಿಸುವ ಕುರಿತು.

**ಉಲ್ಲೇಖ:** ಕಕೃಬೆಆ/ಕೆವಿಕೆ/2019-20 ದಿನಾಂಕ: 11.07.2019

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಕಿತ್ತೂರ ರಾಣಿ ಚನ್ನಮ್ಮಾ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿಯಲ್ಲಿ ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕಿನ ಮದವಾಲ ಗ್ರಾಮದಲ್ಲಿ ಅನುಷ್ಠಾನದಲ್ಲಿರುವ ಕರ್ನಾಟಕ ಕೃಷಿ ಬೆಲೆ ಆಯೋಗ ಪ್ರಾಯೋಜಿತ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಯೋಜನೆಯ 2016-17, 2017-18 ಮತ್ತು 2018-19ನೇ ಸಾಲಿನ ಪ್ರಗತಿ ವರದಿ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

Encl: 3 copies.

Forwarded to the Director of Extension UHS, Bagalkot for further needful

ತಮ್ಮ ವಿಶ್ವಾಸಿ

Kanth

Extension Leader
Horticulture Extension Education Unit
KRC College of Horticulture, Arabhavi-591 218
Gokak (Tq), Belagavi (Dist)

20/7/2019
Dean
K.R.C. College of Horticulture
Arabhavi-591218. Tq:Gokak

22 JUL 2019

**ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ**

**ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ**

**ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ,**

**ಕಿತ್ತೂರ ರಾಣಿ ಚನ್ನಮ್ಮಾ ತೋಟಗಾರಿಕೆ ಮಹಾವಿದ್ಯಾಲಯ,**

**ಅರಭಾವಿ**




**ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ**

# "ರೈತರ ಆದಾಯ ಹಾಗೂ ಕಲ್ಯಾಣವೃದ್ಧಿ ಯೋಜನೆ"

# ಪ್ರಗತಿ ವರದಿ

# 2016–17, 2017–18 ಮತ್ತು 2018–19

ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ **"ರೈತರ ಆದಾಯ ಹಾಗೂ ಕಲ್ಯಾಣವೃದ್ಧಿ ಯೋಜನೆ"**ಯನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಅಡಿಯಲ್ಲಿ ಬರುವ ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕಿನ ಕಿತ್ತೂರ ರಾಣಿ ಚನ್ನಮ್ಮಾ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿಯ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕದ ಮೂಲಕ ಮದವಾಲ ಗ್ರಾಮದಲ್ಲಿ ಪ್ರಾಯೋಗಿಕವಾಗಿ 3 ವರ್ಷ ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಯ 3 ವರ್ಷಗಳ ಪ್ರಗತಿ ವರದಿ ಈ ಕೆಳಗಿನಂತಿದೆ.

ಯೋಜನಾ ಮುಖ್ಯಸ್ಥರು: ಡಾ. ಕಾಂತರಾಜು. ವಿ.
ಸಹ ಯೋಜನಾ ಸಹಾಯಕರು: ಡಾ. ಸಿ. ಬಿ. ಕೌಜಲಗಿ
ಡಾ. ಆಯ್. ಬಿ. ಬಿರಾದಾರ
ಡಾ. ಪ್ರಿತಮ್. ಎಸ್. ಪಿ
ಡಾ. ಚೌಗಲಾ
ಡಾ. ಶ್ರೀದೇವಿ

## ಹಿನ್ನಲೆ

ಸ್ವಾತಂತ್ರ್ಯ ಪಡೆದು ಏಳು ದಶಕಗಳು ಪೂರ್ಣಗೊಳ್ಳುತ್ತಿರುವಾಗ, ದೇಶದ ಅತಿ ದೊಡ್ಡ ಸಾಮಾಜಿಕ ಗುಂಪಾದ ರೈತಾಪಿ ವರ್ಗದ 'ಕಲ್ಯಾಣ' ಮತ್ತು 'ಆದಾಯವೃದ್ಧಿ'ಯ ಪ್ರಸ್ತಾವನೆ ಹೆಚ್ಚು ಕೇಳಿ ಬರುತ್ತಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು. ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಸುವ ಯೋಜನೆಯನ್ನು ರಾಜ್ಯದ ಎಲ್ಲ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಆಯ್ದ ಕೃಷಿ ವಿಜ್ಞಾನ ಕೇಂದ್ರಗಳು, ಆಯಾ ಜಿಲ್ಲೆಯ ಜಿಲ್ಲಾಡಳಿತ, ಅಭಿವೃದ್ಧಿ ಇಲಾಖೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2016 ರಂದು ಅಧ್ಯಕ್ಷರು, ಕೃಷಿ ಬೆಲೆ ಆಯೋಗ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಯ್ದ ಜಿಲ್ಲೆಗಳಲ್ಲಿ ಒಂದೊಂದು ಪ್ರಾತಿನಿಧಿಕ ಗ್ರಾಮದಲ್ಲಿ ಪ್ರಾಯೋಗಿಕವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಯೋಜನೆಯ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿರುತ್ತಾರೆ.

ಇಂತಹ ಯೋಜನೆಗಳ ಮಹತ್ವದ ಮಾಹಿತಿಯನ್ನು ರೈತರಿಗೆ ತಿಳಿಸಿ ಕೃಷಿಯನ್ನು ಲಾಭದಾಯಕ ಉದ್ಯಮವೆಂದು ಮನದಟ್ಟು ಮಾಡುವಂತಹ ಕಾರ್ಯಕ್ರಮ ರೂಪಿಸಬೇಕಾಗಿರುವುದರಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಅಡಿಯಲ್ಲಿ ಬರುವ ಕಿ.ರಾ.ಚ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿಯ, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಅರಭಾವಿಯು ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕಿನ ಮದವಾಲ ಗ್ರಾಮವನ್ನು ಆಯ್ಕೆ ಮಾಡಿಕೊಂಡು ಯೋಜನೆಯ ಯಶಸ್ಸಿಗೆ ಶ್ರಮಿಸುತ್ತಿದೆ. ಈ ಕಾರ್ಯಯೋಜನೆಯು ವಿಶಾಲ ವ್ಯಾಪ್ತಿ ಮತ್ತು ಪ್ರಯೋಜನವನ್ನು ಹೊಂದಿದೆ. ರೈತರು ಹಾಗೂ ರೈತ ಕುಟುಂಬಗಳ ಪ್ರಸಕ್ತ ಸ್ಥಿತಿಗತಿಗಳು, ಅವರ ಜಮೀನಿನ ಹಾಗೂ ಇತರೆ ಸಂಪನ್ಮೂಲಗಳ ಸ್ಥಿತಿಗತಿಗಳು ಮತ್ತು ಅವರು ಬಯಸತಕ್ಕಂತಹ ಬದಲಾವಣೆಗಳನ್ನು ಅರಿತುಕೊಳ್ಳುವುದು ಮೊದಲ ಹಂತವಾಗಿದೆ. ನಂತರ ಬೇರೆಡೆಗಳಲ್ಲಿನ ರೈತರು ಸಾಧಿಸಿರುವ ಪ್ರಗತಿಯನ್ನು ಪ್ರತ್ಯಕ್ಷವಾಗಿ ನೋಡಿ ಅರಿಯುವುದು ಮತ್ತು ತಂತ್ರಜ್ಞಾನದಲ್ಲಿ ಆಗಿರುವ ಅತ್ಯಾಧುನಿಕ ಬದಲಾವಣೆಗಳನ್ನು ರೈತರು ಸ್ವಯಂ ತಿಳಿದುಕೊಳ್ಳುವಂತೆ ಮಾಡಿ ಅವರ ಸಾಮರ್ಥ್ಯ ಹೆಚ್ಚಳವಾಗುವಂತೆ ಮಾಡುವುದು ಎರಡನೆಯ ಹಂತವಾಗಿದೆ.

**ಗ್ರಾಮದ ಸಾಮಾನ್ಯ ಮಾಹಿತಿ:**

| | |
|---|---|
| **ಗ್ರಾಮದ ಹೆಸರು** | ಮದವಾಲ |
| **ಗ್ರಾಮ ಪಂಚಾಯಿತಿ** | ಮದವಾಲ |
| **ಹೋಬಳಿ** | ಅಕ್ಕತಂಗೇರಹಾಳ |
| **ತಾಲ್ಲೂಕು** | ಗೋಕಾಕ |
| **ಜಿಲ್ಲೆ** | ಬೆಳಗಾವಿ |





# ಮದವಾಲ ಗ್ರಾಮದ ಚಿತ್ರಣ

**ಪ್ರಮುಖ ಬೆಳೆಗಳು:**

| | |
|---|---|
| **ಕೃಷಿ** | ಕಬ್ಬು, ಜೋಳ, ಮೆಕ್ಕೆ ಜೋಳ, ಹತ್ತಿ, ತೊಗರಿ, ಅಲಸಂದೆ ಮತ್ತು ಸಿರಿಧಾನ್ಯ ಬೆಳೆಗಳು |
| **ತೋಟಗಾರಿಕೆ ಬೆಳೆಗಳು** | ಟೊಮ್ಯಾಟೊ, ಮೆಣಸಿನ ಕಾಯಿ, ಬೆಂಡೆ, ಬದನೆ ಮೊದಲಾದವುಗಳು |
| **ಪಶುಸಂಗೋಪನೆ** | ಎಮ್ಮೆ, ಹಸುಗಳು, ಮೇಕೆ, ಕುರಿ, ಕೋಳಿ ಸಾಕಾಣಿಕೆ |
| **ಅರಣ್ಯ** | ಬೇವು, ಜಾಲಿ, ನೀಲಗಿರಿ ಇತ್ಯಾದಿ |

**ಜನಸಂಖ್ಯಾ ವಿವರ :**

| **ಒಟ್ಟು ಜನಸಂಖ್ಯೆ** | **ಗಂಡಸರು** | **ಹೆಂಗಸರು** | **ಪರಿಶಿಷ್ಟ ಜಾತಿ** | **ಪರಿಶಿಷ್ಟ ಪಂಗಡ** |
|---|---|---|---|---|
| 2,242 | 1,126 | 1,116 | 61 | 596 |

**ಒಟ್ಟು ಕುಟುಂಬಗಳ ಸಂಖ್ಯೆ:** 474

**ವಿದ್ಯಾಭ್ಯಾಸ ಮಟ್ಟ :**

| ವಿವರ | ಅಕ್ಷರಸ್ಥರು ಶೇಕಡಾವಾರು | ಅನಕ್ಷರಸ್ಥರು ಶೇಕಡಾವಾರು |
|---|---|---|
| **ಗಂಡಸರು** | 78.86 % | 21.14% |
| **ಹೆಂಗಸರು** | 51.47 % | 48.53% |
| **ಒಟ್ಟು** | 65.14 % | 34.86% |

## ಯೋಜನೆಯ ಅಡಿಯಲ್ಲಿ ಕೈಗೊಂಡ ಚಟುವಟಿಕೆಗಳು:

ದಿನಾಂಕ: 09.12.2017 ರಂದು ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ. ಎನ್. ಪ್ರಕಾಶ ಕಮ್ಮರಡಿ ಯವರು ಮದವಾಲ ಗ್ರಾಮಕ್ಕೆ ಭೇಟಿ ನೀಡಿ ಸ್ಥಳಿಯ ಜನರೊಂದಿಗೆ ಚರ್ಚಿಸಿ ಸಂಪೂರ್ಣ ಮಾಹಿತಿ ಪಡೆದುಕೊಂಡರು ಮತ್ತು ಮದವಾಲ ಗ್ರಾಮದಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತೆ ತಿಳಿಸಿದರು.



**19.12.2017 ರಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ. ಎನ್. ಪ್ರಕಾಶ ಕಮ್ಮರಡಿ ಯವರು ಸ್ಥಳಿಯ ಜನಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು.**

**ದಿನಾಂಕ: 02–04–2017 ರಂದು ಸಂಶೋಧನಾ ಹಾಗೂ ಕ್ಷೇತ್ರ ಸಹಾಯಕರ ನೇಮಕಾತಿ ಮಾಡಲಾಯಿತು.**

| ಸಂಶೋಧನಾ ಸಹಾಯಕರು ಹಾಗೂ ಕ್ಷೇತ್ರ ಸಹಾಯಕರಾಗಿ ನೇಮಕಾತಿ ಹೊಂದಿ ಕೆಲಸ ನಿರ್ವಹಿಸಿದವರ ವಿವರ | | ರಾಜೀನಾಮೆ ನೀಡಿದ ದಿನಾಂಕ |
|---|---|---|
| ಸಂಶೋಧನಾ ಸಹಾಯಕರು | ಮಹಾಂತೇಶ ಪಡದಲ್ಲಿ, ಎಂ. ಎಸ್ಸಿ. (ತೋಟಗಾರಿಕೆ) | – |
| ಕ್ಷೇತ್ರ ಸಹಾಯಕರು | ಪೂರ್ಣಿಮಾ ಕೊಪ್ಪದ. ಬಿ. ಎಸ್ಸಿ. (ತೋಟಗಾರಿಕೆ) | 21.02.2019 |
| | ಭೀಮಶಿ ಭಂಡಾರಿ. ಡಿಪ್ಲೋಮಾ (ಕೃಷಿ) | 03.11.2017 |
| | ಸುಜಾತಾ ಪಡದಲ್ಲಿ, ಎಂ. ಎಸ್ಸಿ. (ತೋಟಗಾರಿಕೆ) | 31.03.2018 |

**ಯೋಜನೆಯ ಅನುಷ್ಠಾನದ ಚರ್ಚೆ:** ದಿನಾಂಕ: 18.04.2017 ರಂದು ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ಯೋಜನಾ ಆಯೋಗದ ಮುಖ್ಯಸ್ಥರು ಮತ್ತು ಸಹ ಯೋಜನಾ ಮುಖ್ಯಸ್ಥರು ಮದವಾಲ ಗ್ರಾಮದ ರೈತರೊಡನೆ ಯೋಜನೆಯ ಅನುಷ್ಠಾನ ಮತ್ತು ಗ್ರಾಮದ ಆಯ್ಕೆ ಕುರಿತು ಚರ್ಚಿಸಿದರು.

ಗ್ರಾಮದಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ರೈತರು ಆಸಕ್ತಿ ಮತ್ತು ಉಸ್ತುಕರಾಗಿದ್ದನ್ನು ನೋಡಿ ಗ್ರಾಮದಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲು ನಿರ್ಧರಿಸಲಾಯಿತು.



**18.04.2017 ರಂದು ಮದವಾಲ ಗ್ರಾಮದ ರೈತರೊಡನೆ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸಲಾಯಿತು**

**05.05.2017 ರಂದು ಏಳನೇ ತರಗತಿ ಮೇಲೆ ಶಿಕ್ಷಣ ವಿದ್ಯಾರ್ಹತೆ ಹೊಂದಿದವರು, ಪ್ರತಿಶತ ಶೇಕಡಾ 50ರಷ್ಟು ಒಣ ಬೇಸಾಯ ಮತ್ತು ನೀರಾವರಿ ಬೇಸಾಯ ಹಾಗೂ ಗ್ರಾಮದ ಎಲ್ಲಾ ಜಾತಿಯವರು ಒಳಗೊಂಡಂತೆ 25 ಜನ ರೈತರ ಪೂರ್ಣ ಮಾಹಿತಿಯನ್ನು ಪಡೆದು ಆಯ್ಕೆ ಮಾಡಲಾಯಿತು.**

| ಕ್ರ. ಸಂ | ರೈತರ ಹೆಸರು | ಗ್ರಾಮ | ತಾಲೂಕು | ಜಿಲ್ಲೆ | ವಿದ್ಯಾಭ್ಯಾಸ | ಜಾತಿ |
|---|---|---|---|---|---|---|
| 1 | ಮಾರುತಿ ಬಸಪ್ಪ ಭಾಂವಿ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 2 | ಕೆಂಪಣ್ಣಾ ಅಡಿವೆಪ್ಪಾ ಘೀವಾರಿ | ಮದವಾಲ | ಗೋಕಾಕ | ಬೆಳಗಾವಿ | B.A | 3B |
| 3 | ತಾಯಗೌಡಾ ಸಿದ್ದಪ್ಪ ಪಾಟೀಲ | ಮದವಾಲ | ಗೋಕಾಕ | ಬೆಳಗಾವಿ | B.A. | 3B |
| 4 | ಯಲ್ಲಪ್ಪ ಕೆಂಪಣ್ಣಾ ಬಡಿಗವಾಡ | ಮದವಾಲ | ಗೋಕಾಕ | ಬೆಳಗಾವಿ | B.A. | 3B |
| 5 | ಮಲಗೌಡ ಬಸಗೌಡ ಪಾಟೀಲ | ಮದವಾಲ | ಗೋಕಾಕ | ಬೆಳಗಾವಿ | PUC | 3B |
| 6 | ಬಸವರಾಜ ಮಲ್ಲಪ್ಪ ಶಿಗ್ಗಾಂವಿ | ಮದವಾಲ | ಗೋಕಾಕ | ಬೆಳಗಾವಿ | PUC | ST |
| 7 | ಸತೀಶ ನೀಲಪ್ಪ ಉದ್ದಾನಾಯಕ | ಮದವಾಲ | ಗೋಕಾಕ | ಬೆಳಗಾವಿ | PUC | ST |
| 8 | ರಾಮಪ್ಪ ಮಲ್ಲಪ್ಪ ಹಾದಿಮನಿ | ಮದವಾಲ | ಗೋಕಾಕ | ಬೆಳಗಾವಿ | SSLC | ST |
| 9 | ಆನಂದ ಮಲ್ಲಪ್ಪಾ ನೇಗಿನಹಾಳ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 10 | ಬಸವರಾಜ ಮಾರುತಿ ಮುದ್ದಾರ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 11 | ಸಿದ್ದಪ್ಪ ಮಾರುತಿ ಹುಲಕುಂದ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 12 | ಮಲ್ಲಿಕಾರ್ಜುನ ಸತ್ತೆಪ್ಪಾ ಆಲೂರ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 13 | ಸದಾಶಿವ ಅಜ್ಜಪ್ಪಾ ಕರಗುಪ್ಪಿ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 14 | ಮಲ್ಲಪ್ಪ ಮಾರುತಿ ತಳವಾರ | ಮದವಾಲ | ಗೋಕಾಕ | ಬೆಳಗಾವಿ | 7th | SC |
| 15 | ಚಿದಾನಂದ ಸಿದ್ದಪ್ಪಾ ತಳವಾರ | ಮದವಾಲ | ಗೋಕಾಕ | ಬೆಳಗಾವಿ | 8th | SC |
| 16 | ಬಸವರಾಜ ಪುನಗೌಡ ಪಾಟೀಲ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 17 | ಅಪ್ಪಣ್ಣಾ ನಿಂಗಪ್ಪಾ ಆಲೂರ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| 18 | ಬಸವರಾಜ ನಿರವಾಣಿ ದಾವಲಟ್ಟಿ | ಮದವಾಲ | ಗೋಕಾಕ | ಬೆಳಗಾವಿ | 7th | 3B |

| | | | | | | |
|---|---|---|---|---|---|---|
| **19** | ಸತ್ತೆಪ್ಪಾ ಬಸಪ್ಪಾ ನೆಗಿನಹಾಳ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| **20** | ದ್ಯಾಮಪ್ಪಾ ಚಂದ್ರಪ್ಪಾ ಹೋಳಿ | ಮದವಾಲ | ಗೋಕಾಕ | ಬೆಳಗಾವಿ | PUC | 2A |
| **21** | ಶ್ರೀಕಾಂತ ಮುದ್ದಾರ | ಮದವಾಲ | ಗೋಕಾಕ | ಬೆಳಗಾವಿ | PUC | 3B |
| **22** | ಜ್ಯೋತಿ ಹಣಮಂತ ಹರಿಜನ | ಮದವಾಲ | ಗೋಕಾಕ | ಬೆಳಗಾವಿ | SSLC | SC |
| **23** | ಶ್ರೀದೇವಿ ಸತ್ತೆಪ್ಪಾ ಭಾಂವಿ | ಮದವಾಲ | ಗೋಕಾಕ | ಬೆಳಗಾವಿ | SSLC | 3B |
| **24** | ಬಸವಾ ಸತ್ತೆಪ್ಪಾ ಹಾದಿಮನಿ | ಮದವಾಲ | ಗೋಕಾಕ | ಬೆಳಗಾವಿ | SSLC | ST |
| **25** | ಮಹಾದೇವಿ ಸತ್ತೆಪ್ಪಾ ನೇಗಿನಹಾಳ | ಮದವಾಲ | ಗೋಕಾಕ | ಬೆಳಗಾವಿ | SSLC | 3B |

**ಯೋಜನೆ ಅಡಿಯಲ್ಲಿ 08.05.2017 ರಂದು ಹತ್ತು ಜನ ರೈತರ ಗ್ರಾಮ ಸಮಿತಿ ರಚಿಸಲಾಯಿತು**

| **ಕ್ರ, ಸಂ** | **ಸದಸ್ಯರ ಹೆಸರು** | **ಗ್ರಾಮ** |
|---|---|---|
| 1 | ಯಲಗೌಡ ಪಾಟೀಲ | ಮದವಾಲ |
| 2 | ಈರಯ್ಯ ಮಠಪತಿ | ಮದವಾಲ |
| 3 | ಮಲಗೌಡ ಪಾಟೀಲ | ಮದವಾಲ |
| 4 | ಬಸವನ್ನಿ ಗಾಣಿಗೇರ | ಮದವಾಲ |
| 5 | ಬಸವನ್ನೆಪ್ಪಾ ಗಣಾಚಾರಿ | ಮದವಾಲ |
| 6 | ನಿಂಗಪ್ಪಾ ಜಾಡರ | ಮದವಾಲ |
| 7 | ಸತ್ತೆಪ್ಪಾ ನೆಗಿನಹಾಳ | ಮದವಾಲ |
| 8 | ಅಪ್ಪಯ್ಯ ಗಾಣಿಗೇರ | ಮದವಾಲ |
| 9 | ಮಲ್ಲಪ್ಪಾ ವಣ್ಣೂರ | ಮದವಾಲ |
| 10 | ಸಿದ್ದಗೌಡ ಪಾಟೀಲ | ಮದವಾಲ |

## ಮಣ್ಣಿನ ಆರೋಗ್ಯ ಅಭಿಯಾನ:

ಯೋಜನೆಯ ಅಡಿಯಲ್ಲಿ ದಿನಾಂಕ: 19.05.2017ರಂದು ಮಣ್ಣಿನ ಆರೋಗ್ಯ ಅಭಿಯಾನವನ್ನು ಆಚರಿಸಲಾಯಿತು, ಸದರಿ ಕಾರ್ಯಕ್ರಮದಲ್ಲಿ ಮಣ್ಣು ಮಾದರಿ ತೆಗೆಯುವ ವಿದಾನದ ಬಗ್ಗೆ ತರಬೇತಿ, ಮಣ್ಣಿನ ಪರೀಕ್ಷೆ ಮಾಡಿಸುವ ಮಹತ್ವ, ಅರಿವು ಮೂಡಿಸುವಿಕೆ, ಮಣ್ಣಿನ ಪರೀಕ್ಷೆ ಆಧಾರಿತ ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ಸಾವಯವ ಗೊಬ್ಬರಗಳ ಬಳಕೆ ಮಹತ್ವ ತಿಳಿಸಲಾಯಿತು. ಈ ಸದರಿ ಕಾರ್ಯಕ್ರಮದಲ್ಲಿ ಮದವಾಲ ಗ್ರಾಮದ 35 ಜನ ರೈತರು ಭಾಗವಹಿಸಿದ್ದರು.



**19.05.2017 ರಂದು ಮಣ್ಣಿನ ಆರೋಗ್ಯ ಅಭಿಯಾನವನ್ನು ಮದವಾಲ ಗ್ರಾಮದಲ್ಲಿ ಆಚರಿಸಲಾಯಿತು.**

ಈ ಅಭಿಯಾನದಲ್ಲಿ ಭಾಗವಹಿಸಿದ 25 ಜನ ರೈತರ ಮಣ್ಣು ಪರೀಕ್ಷೆ ಮಾಡಿಸಲಾಯಿತು.ಮಣ್ಣು ಪರೀಕ್ಷೆಯ ವಿವರ ಈ ಕೆಳಗಿನಂತಿದೆ.

**25 ಜನ ರೈತರ ಮಣ್ಣಿನ ಪರೀಕ್ಷೆಯ ಫಲಿತಾಂಶ: ಮಾದರಿ ಫಲಿತಾಂಶ**

| ಕ್ರ. ಸಂ. | ಮಣ್ಣು ಆರೋಗ್ಯ ಮಾಹಿತಿ | ಸಾಮಾನ್ಯ ಮಟ್ಟ | ಪರೀಕ್ಷೆ ಫಲಿತಾಂಶ | ಷರಾ |
|---|---|---|---|---|
| 1 | ರಸಸಾರ | 6.3–8.3 | 7.3 | ಆಮ್ಲಿಯ |
| 2 | ಲವಣಾಂಶ | <1.0 | 0.038 | ಸಮ |
| 3 | ಸಾವಯವ ಇಂಗಾಲ | 0.5–0.75 | 0.3 | ಕಡಿಮೆ |
| 4 | ದೊರೆಯುವ ಸಾರಜನಕ | 280–560 | 171.97 | ಕಡಿಮೆ |
| 5 | ದೊರೆಯುವ ರಂಜಕ | 9–22 | 53.31 | ಹೆಚ್ಚು |
| 6 | ದೊರೆಯುವ ಪೊಟ್ಯಾಶ್ | 50–120 | 38.43 | ಕಡಿಮೆ |
| 7 | ಸತು | 1.0 | 0.86 | ಕಡಿಮೆ |
| 8 | ಕಬ್ಬಿನ | 4.50 | 1.95 | ಕಡಿಮೆ |
| 9 | ತಾಮ್ರ | 0.20 | 1.44 | ಹೆಚ್ಚು |
| 10 | ಮ್ಯಂಗನೀಸ್ | 2.00 | 5.33 | ಹೆಚ್ಚು |
| 11 | ಬೋರಾನ್ | 0.5 | 0.21 | ಕಡಿಮೆ |
| 12 | ಗಂಧಕ | 10 | 16.04 | ಹೆಚ್ಚು |

**ಆದಾಯವೃದ್ಧಿ ಮೇಲಿನ ಪರಿಣಾಮ (ಉದಾ: ಇಳುವರಿ ಹೆಚ್ಚಳ ಇತ್ಯಾದಿ):**

ಮೊದಲು ಬೆಳೆಗಳ ಎಲೆಗಳಲ್ಲಿ ಕೆಂಪು ಬಣ್ಣ ಮತ್ತು ಕಾಂಡಗಲು ದುರ್ಬಲವಾಗಿ ಬೆಳೆಯುತಿದ್ದವು. ಈ ಯೋಜನೆ ಅಡಿಯಲ್ಲಿ ತರಬೇತಿ ಪಡೆದ ನಂತರ ಜೈವಿಕ ಗೊಬ್ಬರ ಮತ್ತು ಸಾವಯವ ಗೊಬ್ಬರವನ್ನು ಉಪಯೋಗಿಸುವುದರಿಂದ ಹಾಗೂ ಮಣ್ಣು ಪರೀಕ್ಷೆ ಆಧಾರದ ಮೇಲೆ ಯೂರಿಯಾ ಮತ್ತು ಡಿ.ಎ.ಪಿ ಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದರಿಂದಕಡಿಮೆ ಖರ್ಚು ಮಾಡಿ ಅಧಿಕ ಇಳುವರಿ ಪಡೆದಿದ್ದಾರೆ.

ಉದಾಹರಣೆ: ಗೋವಿನ ಜೋಳ: ಫಲಾನುಭವಿ ರೈತರಾದ ಶ್ರೀ. ಸತ್ತೆಪ್ಪಾ ನೇಗಿನಹಾಳ ಇವರು ಒಂದು ಎಕರೆ ಕ್ಷೇತ್ರದಲ್ಲಿ ಮೊದಲು 22 ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದರು. ಈ ಯೋಜನೆಯ ತರಬೇತಿ ನಂತರ 26 ಕ್ವಿಂಟಾಲ್ ಇಳುವರಿ ಪಡೆದು, ಒಂದು ಕ್ವಿಂಟಾಲ್ ಗೋವಿನ ಜೋಳಕ್ಕೆ 2000 ರೂಪಾಯಿಯಂತೆ 12000 ರೂಪಾಯಿ ಹೆಚ್ಚಿನ ಆದಾಯ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

ಫಲಾನುಭವಿ ರೈತರಾದ ಶ್ರೀ. ಬಸವರಾಜ ಶಿಗ್ಗಾಂವಿ ಹತ್ತಿ ಬೆಳೆದು ಈ ಒಂದು ಎಕರೆ ಕ್ಷೇತ್ರದಲ್ಲಿ ಮೊದಲು 7 ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದರು. ಈ ಯೋಜನೆಯ ತರಬೇತಿ ನಂತರ 9 ಕ್ವಿಂಟಾಲ್ ಇಳುವರಿ ಪಡೆದು, ಒಂದು ಕ್ವಿಂಟಾಲ್ ಹತ್ತಿಗೆ 5000 ರೂಪಾಯಿಯಂತೆ 10000 ರೂಪಾಯಿ ಹೆಚ್ಚಿನ ಆದಾಯ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

ಸದ್ಯ 8 ಜನ ರೈತರು ಸಾವಯವ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರವನ್ನು ಮೂಂಚುಣಿ ಪ್ರಾತ್ಯೆಕ್ಷತೆ ಕ್ಷೇತ್ರಗಳಾದ ಬೆಂಡೆ ಮತ್ತು ಟೊಮ್ಯಾಟೋ ಬೆಳೆಗಳಿಗೆ ಉಪಯೋಗಿಸುತ್ತಿದ್ದಾರೆ.

## ಮಣ್ಣಿನ ಗ್ರಿಡ್ ಮಾದರಿಯನ್ನು ತೆಗೆಯುವುದು:

ದಿನಾಂಕ: 15.12.2017 ರಂದು ಮದವಾಲ ಗ್ರಾಮದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ಆದೇಶದ ಮೇರೆಗೆ ಎನ್‌ಬಿಎಸ್‌ಎಸ್ ಸಿಬ್ಬಂದಿ ಜೊತೆಗೆ ಸೇರಿ ಒಟ್ಟು 28 ಮಣ್ಣಿನ ಗ್ರಿಡ್ ಮಾದರಿಯನ್ನು ಸಂಗ್ರಹಿಸಲಾಯಿತು ಮತ್ತು ಎನ್‌ಬಿಎಸ್‌ಎಸ್ ಸಿಬ್ಬಂದಿಗಳು ಮಣ್ಣು ಪರೀಕ್ಷೆಯನ್ನು ಮಾಡಿದ್ದಾರೆ.


ಬೆಳೆ ಇರುವ ಕ್ಷೇತ್ರದಲ್ಲಿ ಮತ್ತು ಬೆಳೆ ಇಲ್ಲದ ಕ್ಷೇತ್ರದಲ್ಲಿ ಮಣ್ಣು ಮಾದರಿ ತೆಗೆಯುವ ವಿದಾನದ ಬಗ್ಗೆ ರೈತರು ತಿಳಿದುಕೊಂಡಿರುತ್ತಾರೆ.







**15.12.2017 ರಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಆದೇಶದ ಮೇರೆಗೆ ಮದವಾಲ ಗ್ರಾಮದ ಮಣ್ಣಿನ ಗ್ರಿಡ್ ಮಾದರಿಯನ್ನು ಎನ್‌ಬಿಎಸ್‌ಎಸ್ ಸಿಬ್ಬಂದಿ ಜೊತೆಗೆ ಮಣ್ಣಿನ ಗ್ರಿಡ್ ಮಾದರಿಯನ್ನು ತೆಗೆಯಲಾಗಿದೆ.**


**ಮಣ್ಣಿನ ಗ್ರಿಡ್ ಮಾದರಿ ಸಂಖ್ಯೆಗಳು: 28**






Satellite image of Madavala village Gokak taluk, Belagavi District.



Electrical Conductivity (EC)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Salinity (EC) Area in ha (%)
Non saline (<2 ds/m) 283 (96.37)
* Others 10 (3.62)
* Habitation and Road
Source: NBSS & LUP, Bangalore



Organic Corbon (OC)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Organic Corbon (OC) Area in ha (%)
Low (< 0.5 %) 24 (8.45)
High (> 0.75 %) 258 (87.91)
* Others 10 (3.62)
* Habitation and Road
Source: NBSS & LUP, Bangalore



Available Nitrogen (N)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Nitrogen (N) Area in ha (%)
Medium (280 - 560 kg/ha) 283 (96.37)
* Others 10 (3.62)
* Habitation and Road
Source: NBSS & LUP, Bangalore



Available Phosphorus (P2O5)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Phosphorus (P2O5) Area in ha (%)
Low (<23 kg/ha) 283 (96.37)
* Others 10 93.62)
* Habitation and Road
Source: NBSS & LUP, Bangalore



Available Potassium (K2O)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Potassium (K2O) Area in ha (%)
Low (< 145 kg/ha) 283 (96.37)
* Others 10 (3.62)
* Habitation and Road
Source: NBSS & LUP, Bangalore



Available Sulphur (S)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Sulphur (S) Area in ha (%)
Low (< 10 ppm) 277 (94.53)
Medium (10 -20 ppm) 5 (1.83)
* Others 10 (3.62)
* Habitation and Road
Source: NBSS & LUP, Bangalore


Boron (B)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Boron (B) Area in ha (%)
Low (< 0.5 ppm) 235 (80.18)
Medium (0.5 - 1.0 ppm) 18 (6.22)
High (> 1.0 ppm) 29 (9.96)
* Others 10 (3.62)
* Habitation and Road
Source: NBSS & LUP, Bangalore


Available Iron (Fe)
Madavala Village
(Area - 293.95 ha)
Gokak Taluk, Belgum District,
KARNATAKA
Reference
Fertility Grid
Road/Cart track
Habitation
Land Percel/survey no.
Boundary
Iron (Fe) Area in ha (%)
Deficient (< 4.5 ppm) 283 (96.37)
* Others 10 (3.62)
* Habitation and Road
Source: NBSS & LUP, Bangalore




**ಕಛೇರಿ ಸ್ಥಾಪನೆ:**

ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ" ಅಡಿಯಲ್ಲಿ ಕೃಷಿ ಬೆಲೆ ಆಯೋಗದ ಆದೇಶದ ಮೇರೆಗೆ ಮದವಾಲ ಗ್ರಾಮದಲ್ಲಿ ಯೋಜನೆಯ ಕಾರ್ಯಗಳನ್ನು ನಿರ್ವಹಿಸಲು ಕಛೇರಿ ಸ್ಥಾಪನೆ ಮಾಡಲಾಯಿತು.




**24.05.2017 ರಂದು ಮದವಾಲ ಗ್ರಾಮದಲ್ಲಿ ಮತ್ತು ಗ್ರಾಮದಲ್ಲಿನ ಕಛೇರಿಗೆ ಯೋಜನೆಯ ನಾಮಫಲಕಗಳನ್ನು ಅಳವಡಿಸಲಾಯಿತು.**




**01.06.2017 ರಂದು "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆಯ ನಾಮಫಲಕವನ್ನು ತೋಟಗಾರಿಕೆ ಮಹಾವಿದ್ಯಾಲಯದ ಮುಂದೆ ಅಳವಡಿಸಲಾಯಿತು.**

**ವಿಶ್ವ ಪರಿಸರ ದಿನಾಚರಣೆ:**

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ" ಅಡಿಯಲ್ಲಿ ದಿನಾಂಕ: 05.06.2017 ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಗಿಡಗಳ ಮಹತ್ವ ಮತ್ತು ಉಪಯೋಗ ತಿಳಿಸಿ, ತರಬೇತಿ ನೀಡಿ ಹಣ್ಣಿನ ಗಿಡಗಳನ್ನು ವಿತರಿಸಲಾಯಿತು. ಈ ಗಿಡಗಳನ್ನು ನಾಟಿ ಮಾಡಲಾಗಿತ್ತು.



**ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ" ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಹಣ್ಣಿನ ಗಿಡಗಳನ್ನು ವಿತರಿಸಲಾಯಿತು.**

**ರೈತರು ನಾಟಿ ಮಾಡಿದ ಸಸಿಗಳು:**



**ಬೆಳವಣಿಗೆಯ ಹಂತದಲ್ಲಿರುವ ಗಿಡಗಳು**



**ರಾಷ್ಟ್ರೀಯ ಕಾರ್ಯಗಾರ:**

ದಿನಾಂಕ: 24.06.2017 ರಿಂದ 25.06.2017 ರವರೆಗೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಕೃಷಿ ಬೆಲೆ ಆಯೊಗದ 'ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯ ರಾಷ್ಟ್ರೀಯ ಕಾರ್ಯಗಾರದಲ್ಲಿ ಭಾಗವಹಿಸಿ ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಯ ಧ್ಯೇಯೋದ್ದೇಶಗಳು ಮತ್ತು ಯೋಜನೆ ಅವಧಿ ಮತ್ತು ಮುಂದಿನ ಕಾರ್ಯಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಯಿತು.

ಈ ಸದರಿ ಕಾರ್ಯಕ್ರಮದಲ್ಲಿ 25 ಜನ ಫಲಾನುಭವಿ ರೈತರು ಭಾಗವಹಿಸಿ ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಗೆ ಸಂಭಂದಿಸಿದ ವಿಷಯಗಳ ಮಾಹಿತಿಯನ್ನು ಪಡೆದರು. 25 ಜನ ಫಲಾನುಭವಿ ರೈತರ ಎಲ್ಲೆಗೆರೆ ಸಮೀಕ್ಷೆ ಕೈಗೊಳ್ಳಲು ಸಲಹೆ ನೀಡಿದರು.

25 ಜನ ಫಲಾನುಭವಿ ರೈತರ ಎಲ್ಲೆಗೆರೆ ಸಮೀಕ್ಷೆ ಕೈಗೊಂಡು ಮಾಹಿತಿ ಸಂಗ್ರಹಿಸಿ ಪ್ಲಸ್ ಟ್ರಸ್ಟ್ ಸಂಸ್ಥೆಗೆ ಕಳುಹಿಸಲಾಯಿತು. ಈ ಸಮೀಕ್ಷೆ ಆಧಾರದ ಮೇಲೆ ಪ್ಲಸ್ ಟ್ರಸ್ಟ್ ಸಂಸ್ಥೆ 25 ಜನ ರೈತರಿಗೆ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ಮಾದರಿಗಳನ್ನು ಸಿದ್ಧಪಡಿಸಿ ಸಭೆ ನಡೆಸಿ ತಿಳಿಸಿದರು. ಈಗ ರೈತರು ಹಂತ ಹಂತವಾಗಿ ಪದ್ಧತಿಗಳನ್ನು ಅಳವಡಿಸಿಕೊಂಡು ಆರ್ಥಿಕದಲ್ಲಿ ಬದಲಾವಣೆ ಕಾಣುತ್ತಿದ್ದಾರೆ.






**24.06.2017 ರಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಏರ್ಪಡಿಸಿದ್ದ ರಾಷ್ಟೀಯ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು.**

**ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ:** ಈ ಯೋಜನೆ ತರಬೇತಿ ಪಡೆದ ನಂತರ ರೈತರು ಸಮಗ್ಗ ಕೃಷಿ ಪದ್ಧತಿಯನ್ನು ಹಂತ ಹಂತವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ.

| ಕ್ರ. ಸಂ. | ರೈತರ ಹೆಸರು | ಅಳವಡಿಸಿಕೊಂಡ ವಿವರ | ಸಂಖ್ಯೆ | ಖರೀದಿಸಿದ ಮೊತ್ತ | ಖರ್ಚು | ಮಾರಾಟದ ಅಂದಾಜು ಮೊತ್ತ | ಒಟ್ಟು ಆದಾಯ | ನಿವ್ವಳ ಆದಾಯ |
|---|---|---|---|---|---|---|---|---|
| 01 | ಸತೀಶ ಉದ್ದಾನಾಯಕ | ಆಡು ಸಾಕಾಣಿಕೆ | 06 | 3000 | 4000 | 7000 ರೂ. ಒಂದು ಆಡಿಗೆ | 42,000 | 38,000 |
| 02 | ಸತ್ತೆಪ್ಪಾ ನೇಗಿನಹಾಳ | ಕೋಳಿ ಸಾಕಾಣಿಕೆ | 30 | ಸರಕಾರಿ ಇಲಾಖೆಯಿಂದ ಉಚಿತವಾಗಿ ಪಡೆದಿರುತ್ತಾರೆ | 1000 | 200 ರೂ. ಒಂದು ಕೋಳಿಗೆ | 6,000 | 5,000 |

**ಆರ್ಥಿಕ ಬದಲಾವಣೆ:** ಯೋಜನೆ ನಂತರ 10 ಜನ ರೈತರು ಕೃಷಿ ಡಿಪ್ಲೋಮಾ ಕೋರ್ಸಿಗೆ ನೋಂದಣಿ ಮಾಡಿಸಿ, ತರಬೇತಿ ಪಡೆದು ಪರೀಕ್ಷೆ ಬರೆದಿದ್ದಾರೆ. ಫಲಿತಾಂಶ ಬರುವ ಹಂತದಲ್ಲಿದೆ.

## ರಾಜ್ಯ ಮಟ್ಟದ ಕಾರ್ಯಾಗಾರ:

ದಿನಾಂಕ: 02.03.2018 ರಿಂದ 03.03.2018 ರವರೆಗೆ ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು ಕೇಂದ್ರಿಯ ವಿಶ್ವವಿದ್ಯಾಲಯ, ಕಲಬುರಗಿ ಇವರ ಸಹಯೋಗದೊಂದಿಗೆ ರೈತರಲ್ಲಿ ಗ್ರಾಮೀಣ ನೈರ್ಮಲ್ಯ ಕಾಪಾಡುವ ಹಾಗೂ ಮೂಲಭೂತ ಸೌಕರ್ಯಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮದಲ್ಲಿ 8 ಜನ ಫಲಾನುಭವಿ ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡಿರುತ್ತಾರೆ.

ಗ್ರಾಮೀಣ ನೈರ್ಮಲ್ಯ ಕಾಪಾಡಲು ಚರಂಡಿಗಳ ವ್ಯವಸ್ಥೆ ಕಾರಣಾಂತರಗಳಿಂದ ನಿರ್ಮಾಣವಾಗಿಲ್ಲ. ೧೨ ರೈತರು ಸರಕಾರಿ ಯೋಜನೆಯಿಂದ ಶೌಚಾಲಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಸಾಮಾಜಿಕ ಸಮಸ್ಯೆಗಳು ಈಗ ಇನ್ನೂ ಪರಿಹಾರವಾಗುವ ಹಂತದಲ್ಲಿವೆ.





**02.03.2018 ರಿಂದ 03.03.2018 ರಂದು ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು ಕೇಂದ್ರಿಯ ವಿಶ್ವವಿದ್ಯಾಲಯ, ಕಲಬುರಗಿ ಸಹಯೋಗದೊಂದಿಗೆ ಸಾಮಾಜಿಕ ಸಮಸ್ಯೆಗಳ ಕುರಿತು ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಮದವಾಲ ಗ್ರಾಮದ ರೈತರು ಭಾಗವಹಿಸಿದರು.**

## ರಾಜ್ಯ ಮಟ್ಟದ ಕಾರ್ಯಾಗಾರ:

ದಿನಾಂಕ: 26.07.2018 ರಂದು ಬೆಂಗಳೂರಿನ ಯು.ಎ.ಎಸ್ ಅಲೂಮಿನಿಯಮ್ ಅಸೋಸಿಯೆಸನ್ನನಲ್ಲಿ ಜರುಗಿದ "ರಾಷ್ಟ್ರೀಯ ಕಾರ್ಯಾಗಾರ"ದಲ್ಲಿ ಮದವಾಲ ಗ್ರಾಮದ 4 ಜನ ರೈತರೊಂದಿಗೆ ಭಾಗವಹಿಸಲಾಯಿತು. ಈ ಕಾರ್ಯಾಗಾರದಲ್ಲಿ ಕೃಷಿ ಬೆಳೆಗಳ ಬೆಂಬಲ ಬೆಲೆಯ ಕುರಿತು ಚರ್ಚೆ ಮತ್ತು ಮಾಹಿತಿಯನ್ನು ಪಡೆಯಲಾಯಿತು.



**ದಿನಾಂಕ: 26.07.2018 ರಂದು ಬೆಂಗಳೂರಿನ ಯು.ಎ.ಎಸ್ ಅಲೂಮಿನಿಯಮ್ ಅಸೋಸಿಯೆಸನ್ನನಲ್ಲಿ ಜರುಗಿದ "ರಾಷ್ಟ್ರೀಯ ಕಾರ್ಯಾಗಾರ"ದಲ್ಲಿ ಮದವಾಲ ಗ್ರಾಮದ 4 ಜನ ರೈತರೊಂದಿಗೆ ಭಾಗವಹಿಸಲಾಯಿತು**

## ಎಲ್ಲಗೆರೆ ಸಮೀಕ್ಷೆಯ ತರಬೇತಿ ಕಾರ್ಯಕ್ರಮ:

ಎಲ್ಲಗೆರೆ ಸಮೀಕ್ಷೆಯ ಪೂರ್ವಭಾವಿ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೋಳ್ಳಲಾಯಿತು ಮತ್ತು ಎಲ್ಲಗೆರೆ ಸಮೀಕ್ಷೆಯನ್ನು ದಿನಾಂಕ: 14.07.2017 ರಿಂದ 16.09.2017 ವರೆಗೆ ಮದವಾಲ ಗ್ರಾಮದ 340 ಜನ ರೈತರ ಎಲ್ಲಗೆರೆ ಸಮೀಕ್ಷೆಯನ್ನು ಮಾಡಲಾಯಿತು.



**07.07.2017 ರಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ಎಲ್ಲಗೆರೆ ಸಮೀಕ್ಷೆಯ ಪೂರ್ವಭಾವಿ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೋಳ್ಳಲಾಯಿತು.**

**ಎಲ್ಲೆಗೆರೆ ಸಮಿಕ್ಷೆ:**

ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ದಿನಾಂಕ: 14.07.2017 ರಿಂದ 16.09.2017 ವರೆಗೆ ಮದವಾಲ ಗ್ರಾಮದ 340 ಜನ ರೈತರ ಎಲ್ಲೆಗೆರೆ ಸಮೀಕ್ಷೆಯನ್ನು ಮಾಡಲಾಯಿತು.

ಮೊದಲ ಹಂತದ ರೈತರ ಎಲ್ಲೆಗೆರೆ ಸಮಿಕ್ಷೆಯ ಮಾಹಿತಿ ಸಂಗ್ರಹಣೆ ಮಾಡಿ ಅಂಕಿ ಅಂಶಗಳನ್ನು ಕಲೆ ಹಾಕಲಾಗಿದೆ. ಈ ಸಮೀಕ್ಷೆಯಲ್ಲಿ ರೈತರ ಸಾಮಾನ್ಯ ಮಾಹಿತಿ, ಕುಟುಂಬದ ಮಾಹಿತಿ, ಭೂ ಹಿಡುವಳಿ, ಭೂ ವ್ಯವಹಾರ ವಿವರಗಳು (10 ವರ್ಷಗಳಿಂದ ಇಚೆಗೆ), ಮಣ್ಣಿನ ಪರೀಕ್ಷೆ, ನೀರಾವರಿಗಾಗಿ ವೆಚ್ಚ, ಬೆಳೆ ಬೆಳೆದ ವಿವರಗಳು, ಬೆಳೆವಾರು ಉತ್ಪಾದನಾ ವೆಚ್ಚ ಮತ್ತು ಆದಾಯ, ಕೊಯ್ಲೋತ್ತರ ನಷ್ಟಗಳು, ಮಾರುಕಟ್ಟೆಯ ವಿವರಗಳು, ನಿರ್ದಿಷ್ಟ ಮಾರುಕಟ್ಟೆಯನ್ನು ಆಯ್ಕೆ ಮಾಡಲು ಕಾರಣಗಳು, ದಲ್ಲಾಳಿಗಳಿಂದ ಸೇವೆ/ಸೌಲಭ್ಯ ಪಡೆಯುತ್ತಿದ್ದೀರಾ, ರೈತರು ಎದುರಿಸುತ್ತಿರುವ ಉತ್ಪಾದನಾ ಮತ್ತು ಮಾರುಕಟ್ಟೆಯ ತೊಂದರೆಗಳು, ಇತರೆ ಆದಾಯದ ಮೂಲಗಳು, ಸರ್ಕಾರಿ ಕಾರ್ಯಕ್ರಮಗಳ ಮೂಲಕ ಆದಾಯ ವರ್ಗಾವಣೆ ( 2016–17 ನೇ ಸಾಲಿನ ಮಾಹಿತಿ), ಕೃಷಿ ಮತ್ತು ಇತರೆ ಇಲಾಖೆಗಳ ಸರ್ಕಾರಿ ಕಾರ್ಯಕ್ರಮಗಳ ಮೂಲಕ ಆದಾಯ, ಕೃಷಿಯೇತರ ಉದ್ಯೋಗಗಳು, ಹೊಂದಿರುವ ಚರಾಸ್ತಿ ವಿವರಗಳು, ಸ್ಥಿರ ಆಸ್ತಿ ವಿವರಗಳು, ಹಣಕಾಸು ಮತ್ತು ಸಾಲದ ವಿವರಗಳು, ಸಾಲದ ಮೂಲ, ಕುಟುಂಬದ ಖರ್ಚುಗಳು, ಆರೋಗ್ಯ ಸ್ಥಿತಿಗತಿ ಮತ್ತು ಆರೋಗ್ಯಕ್ಕೆ ತಗಲುವ ಖರ್ಚು, ಸಮುದಾಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಮತ್ತು ಮಾಧ್ಯಮಗಳಿಗೆ ಒಡ್ಡಿಕೊಳ್ಳುವಿಕೆ.

ರೈತರ ಸ್ಥಿತಿಗತಿ ಮತ್ತು ಸಮಸ್ಯೆಗಳನ್ನು 3 ವರ್ಷದ ನಂತರ ಪರಿಶೀಲಿಸಿದಾಗ ರೈತರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬದಲಾವಣೆಯಾದ ವಿವರ ಈ ಕೆಳಗಿನಚಿತಿದೆ. ಶ್ರೀ. ಸತ್ತೆಪ್ಪಾ ನೇಗಿನಹಾಳ ಮತ್ತು ಬಸು ಶಿಗ್ಗಾವಿಯವರು ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣಿನಲ್ಲಿ ಹೆಚ್ಚು ಇದ್ದ ಪೋಷಕಾಂಶಗಳನ್ನು ಭೂಮಿಗೆ ಕಡಿಮೆ ಕೊಟ್ಟಿದ್ದಾರೆ. ಇದರಿಂದ ಖರ್ಚು ಕಡಿಮೆಯಾಗಿದೆ ಹಾಗೂ ಜೈವಿಕ ಗೊಬ್ಬರಗಳನ್ನು ಉಪಯೋಗಿಸಿದ್ದರಿಂದ ಕೀಟ ಹಾಗೂ ರೋಗಗಳ ಭಾದೆ ಕಡಿಮೆಯಾಗಿದೆಯೆಂದು ತಿಳಿಸಿದ್ದಾರೆ. ಮೊದಲು ಕಬ್ಬು ಮತ್ತು ಗೋವಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಈ ಯೋಜನೆ ತರಬೇತಿ ಪಡೆದ ನಂತರ ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಮತ್ತು ಹತ್ತಿಯಲ್ಲಿ ಶೇಂಗಾ ಬೆಳೆಯನ್ನು ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ ( ಮಲ್ಲಿಕಾರ್ಜುನ ಆಲೂರ ಮತ್ತು ಸಿದ್ದಪ್ಪಾ ಹುಲಕುಂದ).



**ದಿನಾಂಕ: 11.08.2017, 12.08.2017 ರಿಂದ 13.08.2017 ರವರೆಗೆ ಬೆಂಗಳೂರಿನ ISEC ಸಂಸ್ಥೆಯ ಸಿಬ್ಬಂದಿಯು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮದವಾಲ ಗ್ರಾಮಕ್ಕೆ ಭೇಟಿಕೊಟ್ಟು ರೈತರೊಂದಿಗೆ ಸಮಾಲೋಚನೆ ಕೈಗೊಂಡು ಎಲ್ಲೆಗೆರೆ ಸಮೀಕ್ಷೆಯ ಮಾಹಿತಿಯನ್ನು ಪರಿಶೀಲಿಸಿತು.**

**ಎಲ್ಲೆಗೆರೆ ಸಮಿಕ್ಷೆ:**

1. ಮದವಾಲ ಗ್ರಾಮದಲ್ಲಿ ಮೂಲಭೂತ ಸೌಕರ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಎಲ್ಲೆಗೆರೆ ಸಮಿಕ್ಷೆ ಮಾಡಲಾಗಿದೆ.

2. ಕೃಷಿಯಲ್ಲಿ ಮುಂದುವರೆಯುವ ಕುರಿತು ಯುವ ರೈತರು ಮತ್ತು ರೈತ ಮಹಿಳೆಯರ ಎಲ್ಲೆಗೆರೆ ಸಮೀಕ್ಷೆಯನ್ನು ಮಾಡಲಾಗಿದೆ (ದಿನಾಂಕ: 22.02.2017 ರಿಂದ 27.02.2017).

3.ಮದವಾಲ ಗ್ರಾಮದ ರೈತರಿಗೆ ಸರಕಾರದಿಂದ ಸಿಗುವ ಯೋಜನೆಗಳ ಬಗ್ಗೆ ಎಲ್ಲೆಗೆರೆ ಸಮೀಕ್ಷೆಯನ್ನು ಮಾಡಲಾಗಿದೆ (ದಿನಾಂಕ: 09.02.2018 ರಿಂದ 22.02.2018).

ಎಲ್ಲೆಗೆರೆ ಸಮಿಕ್ಷೆಯನ್ನು ಮಾಡಲಾಗಿದೆ ಹಾಗೂ ಅಂಕಿ ಅಂಶಗಳನ್ನು ಕಲೆ ಹಾಕಿ ಕೃಷಿ ಬೆಲೆ ಆಯೋಗಕ್ಕೆ ಕಳುಹಿಸಲಾಗಿದೆ.





**01.04.2018 ರಿಂದ 30.04.2018ರವರೆಗೆ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ಮದವಾಲ ಗ್ರಾಮದಿಂದ ವಲಸೆ ಹೋದವರ (20), ಆತ್ಮಹತ್ತೆ ಮಾಡಿಕೊಂಡ ರೈತರ, ಕೃಷಿಯಲ್ಲಿ ಮುಂದುವರೆಯುವ ಯುವ ರೈತ ಮತ್ತು ರೈತ ಮಹಿಳೆಯರ (10) ಸಮೀಕ್ಷೆಯನ್ನು ಮಾಡಲಾಯಿತು.**

**ಬದಲಾವಣೆ:** ರೈತರು ಈ ಯೋಜನೆ ಅಡಿಯಲ್ಲಿ ತರಬೇತಿ ಪಡೆದುಕೊಂಡ ನಂತರ ಯುವ ರೈತ ಮತ್ತು ರೈತ ಮಹಿಳೆಯುರು ಕೃಷಿಯಲ್ಲಿ ಮುಂದುವರೆಯಲು ಆಸಕ್ತಿ ಹೊಂದಿದ್ದಾರೆ. 2018–19 ರಲ್ಲಿ ಸಮೀಕ್ಷೆ ಮಾಡಿದ ನಂತರ ಒಂದು ವರ್ಷದಲ್ಲಿ ಆತ್ಮಹತ್ತೆಯಂತಹ ಘಟನೆಗಳು ಕಂಡುಬಂದಿರುವುದಿಲ್ಲ.

## ರೈತರ ಆರೋಗ್ಯ ತಪಾಸಣಾ ಶಿಬಿರ:

ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ರೈತರ ಆರೋಗ್ಯ ತಪಾಸಣಾ ಶಿಬಿರವನ್ನು ಕಸ್ತೂರಭಾ ವೈದ್ಯಕೀಯ ಮಹಾವಿದ್ಯಾಲಯ ಮಣಿಪಾಲ ಇವರ ಸಹಯೋಗದೊಂದಿಗೆ ಮದವಾಲ ಗ್ರಾಮದಲ್ಲಿ ದಿನಾಂಕ: 04.08.2017 ರಂದು ನೂರು ಜನ ರೈತರ ಆರೋಗ್ಯ ಮಾಡಿಸಲಾಯಿತು.

ಆರೋಗ್ಯ ತಪಾಸಣೆಗೆ ತಗುಲುವ ವೆಚ್ಚದಲ್ಲಿ ಇಳಿಕೆ. ರೈತರ ಆರೋಗ್ಯ ತಪಾಸಣಾ ಮಾಡಿಸಿ ವರದಿಯನ್ನು ರೈತರಿಗೆ ನೀಡಲಾಗಿದೆ.







**04.08.2017 ರಂದು ಜರುಗಿದ ರೈತರ ಆರೋಗ್ಯ ತಪಾಸಣೆ ಶಿಬಿರ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ವೃದ್ಧಿ ಯೋಜನೆ" ಮದವಾಲ ಗ್ರಾಮದ 100 ಜನ ರೈತರ ಆರೋಗ್ಯ ತಪಾಸಣೆ ಮಾಡಿಸಲಾಯಿತು.**

| ಕ್ರ.ಸಂ | ಶಿಬಿರಾರ್ಥಿಗಳ ಹೆಸರು | ಕ್ರ.ಸಂ | ಶಿಬಿರಾರ್ಥಿಗಳ ಹೆಸರು |
|---|---|---|---|
| 1 | ಅನ್ನಪೂರ್ಣ ಅ ನಿರವಾಣಿ | 51 | ಬಸಪ್ಪ ನಿ ಅವ್ವಣ್ಣಗೋಳ |
| 2 | ಶಿವಾನಂದ ಮ ಶಿಗ್ಗಾಂವಿ | 52 | ಬಸವ್ವ ಸ ಹಾದಿಮನಿ |

| | | | |
|---|---|---|---|
| 3 | ಸದಾಶಿವ ಕರುಗುಪ್ಪಿ | 53 | ರಾಮಪ್ಪ ಮ ಉದ್ದಾನಾಯಕ |
| 4 | ಸದಾಶಿವ ಬಿ. ಕರುಗುಪ್ಪಿ | 54 | ಸುರೇಖಾ ನಿ ಉದ್ದಾನಾಯಕ |
| 5 | ಶಿವ ಲಿಂಗಪ್ಪ ಬಸವಣ್ಣೆಪ್ಪ ಬಾಳಾನ್ನಾಗೋಳ | 55 | ಸವಿತಾ ಪ ಶಿಗ್ಗಾಂವಿ |
| 6 | ಚಿದಾನಂದ ಸಿದ್ದಪ್ಪ ತಳವಾರ | 56 | ಕಸ್ತೂರಿ ರಾ ಉದ್ದಾನಾಯಕ |
| 7 | ಯಲ್ಲವ್ವ ಮಾರುತಿ ಹರಿಜನ | 57 | ಕಮಲವ್ವ ಶಿವಾನಂದ ಶಿಗ್ಗಾಂವಿ |
| 8 | ಯಲ್ಲವ್ವ ಬರಮಪ್ಪ ತಳವಾರ | 58 | ಸತಗಂಗವ್ವ ಬ ಶಿಗ್ಗಾಂವಿ |
| 9 | ಅವ್ವಕ್ಕ ಶಂಕರ ಹರಿಜನ | 59 | ಸತ್ಯಪ್ಪ ಚ ಹೋಳಿ |
| 10 | ಅಡಿವೆಪ್ಪ ಬಾಳಪ್ಪ ಘೀವಾರಿ | 60 | ಮಾರುತಿ ಬ ಆಲೂರ |
| 11 | ಶಿವಪ್ಪ ನಿಂಗಪ್ಪ ಓಬಿ | 61 | ಬಾಬು ಬ ದಂಡೀನ |
| 12 | ಮಲ್ಲಪ್ಪ ಮಾರುತಿ ತಳವಾರ | 62 | ಮಲಗೌಡ ನಿ ಪಾಟೀಲ |
| 13 | ನೀಲವ್ವ ಸಿದ್ದಪ್ಪ ಹರಿಜನ | 63 | ಕಸ್ತೂರೆವ್ವಾ ತಾ ಮುದ್ದಾರ |
| 14 | ಅಕ್ಕಮ್ಮ ಅರ್ಜುನ ಹರಿಜನ | 64 | ನಿಂಗಪ್ಪ ಅ ಆಲೂರ |
| 15 | ಜ್ಯೋತಿ ಹನುಮಂತ ಹರಿಜನ | 65 | ಬಸವಂತೆಪ್ಪ ನಿ ಗಣಾಚಾರಿ |
| 16 | ಸೋನವ್ವ ಕರಿಯಪ್ಪ ಹರಿಜನ | 66 | ಮಾರುತಿ ಬ ಭಾಂವಿ |
| 17 | ಚಂದ್ರವ್ವ ಮಾರುತಿ ಹರಿಜನ | 67 | ಸತ್ಯಪ್ಪ ಬ ನೇಗಿನಹಾಳ |
| 18 | ಶಾರವ್ವ ಬ ನೇಗಿನಹಾಳ | 68 | ರತ್ನವ್ವ ಮ ಅಕ್ಕಿಮರದ |
| 19 | ಬಸುರಾಜ ಪು. ಪಾಟೀಲ | 69 | ಬಸಪ್ಪ ಲ ಭಾಂವಿ |
| 20 | ರಾಯಪ್ಪ ಯ ಉದ್ದಾನಾಯಕ | 70 | ಅಪ್ಪಣ್ಣ ನಿಂ ಆಲೂರ |
| 21 | ತಾಯಪ್ಪ ಯ ಮುದ್ದಾರ | 71 | ವಿಠ್ಠಲ ಬ ಭಾಂವಿ |
| 22 | ಮಾರುತಿ ಶಂ ಪಾಟೀಲ | 72 | ಮಹಾದೇವಿ ಬ ಮಠಪತಿ |
| 23 | ಶ್ರೀಕಾಂತ ಯ ಮುದ್ದಾರ | 73 | ಸದ್ಯವ್ವ ನಿ ಪಾಟೀಲ |
| 24 | ಪುನಗೌಡ ತಾಯಪ್ಪ ಪಾಟೀಲ | 74 | ಬಸುರಾಜ ಬಾ ಪಾಟೀಲ |
| 25 | ಮಲ್ಲಪ್ಪ ಸತ್ಯಪ್ಪ ಆಲೂರ | 75 | ಮಲ್ಲಿಕಾರ್ಜುನ ಸ ಆಲೂರ |
| 26 | ಶ್ರೀಕಾಂತ ಅ ನೇಸರಗಿ | 76 | ಆನಂದ ರಾ ಗಣಾಚಾರಿ |
| 27 | ಮಲಗೌಡ ಬ ಪಾಟೀಲ | 77 | ಆನಂದ ನಿ ಆಲೂರ |
| 28 | ಬಸುರಾಜ ಯ ಮುದ್ದಾರ | 78 | ಬಸುರಾಜ ಶಂ ನೇಸರಗಿ |
| 29 | ಅಜ್ಜಪ್ಪ ಬ ಪಾಟೀಲ | 79 | ಯಲ್ಲಪ್ಪ ಕೆ ಬಡಿಗವಾಡ |
| 30 | ಬಸವ್ವ ಯಲಗೌಡ ಪಾಟೀಲ | 80 | ಮಲ್ಲಪ್ಪ ಯ ಮುದ್ದಾರ |
| 31 | ರಾಮಪ್ಪ ಮ ಹಾದಿಮನಿ | 81 | ಅನೀಲ ರಾ ನಿರವಾಣಿ |
| 32 | ಫಕೀರಪ್ಪ ಮ ಜಾಡರ | 82 | ಶ್ರೀದೇವಿ ಸ ಭಾಂವಿ |
| 33 | ಬಾಳಪ್ಪ ಮ ರಾಜನಗಟ್ಟಿ | 83 | ಅಪ್ಪಯ್ಯ ಸ ಭಾಂವಿ |
| 34 | ಬಸುರಾಜ ನಿ ಉದ್ದಾನಾಯಕ | 84 | ಅಡಿವೆಪ್ಪ ಗು ಮೆಲ್ಮಟ್ಟಿ |
| 35 | ಆನಂದ ಮ ನೇಗಿನಹಾಳ | 85 | ಬಸವರಾಜ ನಿ ದಾವಲಟ್ಟಿ |
| 36 | ಮಲ್ಲಪ್ಪ ಸಿ ನೇಗಿನಹಾಳ | 86 | ಸಿದ್ದಪ್ಪ ಮಾ ಹುಲಕುಂದ |
| 37 | ಗೌಡಪ್ಪ ಬ ಆಲೂರ | 87 | ರಾಜೇಂದ್ರ ಅ ಗಣಾಚಾರಿ |
| 38 | ಮಾರುತಿ ಬ ಕರಡಿ | 88 | ಮಹಾನಂದಾ ಸಿ ಹುಲಕುಂದ |
| 39 | ದ್ಯಾಮಪ್ಪ ಚಂದ್ರಪ್ಪ ಹೋಳಿ | 89 | ಅಡಿವೆಪ್ಪ ಸುತಗಟ್ಟಿ |
| 40 | ಸತ್ಯಪ್ಪ ಅಪ್ಪಣ್ಣಾ ಉದ್ದಾನಾಯಕ | 90 | ತಾಯಗೌಡ ಸಿ ಪಾಟೀಲ |
| 41 | ನಿಂಗಪ್ಪ ಮಲ್ಲಪ್ಪ ಹಾದಿಮನಿ | 91 | ಮಹಾದೇವಿ ಸ ನೇಗಿನಹಾಳ |
| 42 | ಸಿದ್ದಗವಡ ಬ ಪಾಟೀಲ | 92 | ಶಿವರುದ್ರ ಶ್ರೀ ಗೋಟಡಕಿ |
| 43 | ಬಸವಣ್ಣಿ ಸಿ ಗಾಣಿಗೇರ | 93 | ಈರಪ್ಪ ಬ ದಾವಲಟ್ಟಿ |

| | | | |
|---|---|---|---|
| 44 | ಬಸವರಾಜ ಮ ಶಿಗ್ಗಾಂವಿ | 94 | ಸತ್ಯಪ್ಪ ಅ ಭಾಂವಿ |
| 45 | ನೀಲಪ್ಪ ತಾ ಉದ್ದಾನಾಯಕ | 95 | ಮಲ್ಲಪ್ಪ ಬಾಳಪ್ಪ ಪೂಜೇರಿ |
| 46 | ಹನಮವ್ವ ಚ ಹೋಳಿ | 96 | ಬಾಳಪ್ಪ ಯ ಮುದ್ದಾರ |
| 47 | ಮಲ್ಲವ್ವ ರಾ ಉದ್ದಾನಾಯಕ | 97 | ಸರಸ್ವತಿ ಮಾ ಬಡಿಗೇರ |
| 48 | ಸತೀಶ ನೀ ಉದ್ದಾನಾಯಕ | 98 | ಭೀಮಗೌಡ ಬ ಪಾಟೀಲ |
| 49 | ಸತ್ಯಪ್ಪ ನಿ ಹಾದಿಮನಿ | 99 | ಕೆಂಪಣ್ಣ ಅ ಶಿವಾರಿ |
| 50 | ಕೆಂಚವ್ವ ಮ ಶಿಗ್ಗಾಂವಿ | 100 | ಗಟಿಗೆಪ್ಪ ಅ ಗಾಣಿಗೇರ |

## ಸಮಗ್ರ ಕೃಷಿ ಪದ್ಧತಿ ತರಬೇತಿ ಮತ್ತು ಕ್ಷೇತ್ರ ಭೇಟಿ:

### ಸಮಗ್ರ ಕೃಷಿ ಪದ್ಧತಿ ತರಬೇತಿ:

ಮದವಾಲ ಗ್ರಾಮದ ಆಯ್ಕೆಗೊಂಡ 25 ಜನ ಫಲಾನುಭವಿ ರೈತರಿಗೆ ದಿನಾಂಕ : 16.08.2017 ರಂದು ಸಮಗ್ರ ಕೃಷಿ ಪದ್ಧತಿಯ ಕುರಿತು ಡಾ. ಮುಕುಂದ ಜೋಷಿಯವರು ಮಾರ್ಗದರ್ಶನ ನೀಡಿದರು. ಸಮಗ್ರ ಕೃಷಿ ಪದ್ಧತಿ ಅಳವಡಿಕೆಯಿಂದ ಬೇರೆ ಬೇರೆ ಮೂಲಗಳಿಂದ ಆದಾಯವನ್ನು ವೃದ್ಧಿ ಮಾಡಬಹುದು




**16.08.2017 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮದವಾಲ ಗ್ರಾಮದ ಆಯ್ಕೆಗೊಂಡ 25 ಜನ ಫಲಾನುಭವಿ ರೈತರಿಗೆ ಸಮಗ್ರ ಕೃಷಿ ಪದ್ಧತಿಯ ಕುರಿತು ಡಾ. ಮುಕುಂದ ಜೋಷಿಯವರು ಮಾರ್ಗದರ್ಶನ ನೀಡಿದರು.**

## ಸಮಗ್ರ ಕೃಷಿ ಪದ್ಧತಿ ತರಬೇತಿ ಮತ್ತು ಕ್ಷೇತ್ರ ಭೇಟಿ:

ಗೋಕಾಕ ತಾಲೂಕಿನ ರಾಜಾಪುರ ಗ್ರಾಮದ ಪ್ರಗತಿಪರ ರೈತರಾದ ಶ್ರೀ.ರಾಮಚಂದ್ರ ಗುಂಡಪ್ಪಗೋಳ ಇವರ ಕ್ಷೇತ್ರದಲ್ಲಿ ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಸಮಗ್ರ ಕೃಷಿ ಪದ್ಧತಿ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ: 23.08.2017 ರಂದು ನಡೆಸಲಾಯಿತು ಮತ್ತು ಶ್ರೀ. ಶಂಕರ ಬೆಳವಿ ರವರ ತೋಟದಲ್ಲಿ ಪಶು ಸಾಕಾಣಿಕೆಯ ಕ್ಷೇತ್ರ ಭೇಟಿ ಮಾಡಲಾಗಿದೆ. ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯಿಂದ ಆದಾಯದ ಮೂಲಗಳು ವೃದ್ಧಿಗೊಂಡು ಆದಾಯದಲ್ಲಿ ಹೆಚ್ಚಳ

ಕಾಣಬಹುದು ಮತ್ತು ಪಶು ಸಾಕಾಣಿಕೆಯನ್ನು ಮಾಡುವುದರಿಂದ ಲಾಭವಾಗುತ್ತದೆ











**23.08.2017 ರಂದು ಗೋಕಾಕ ತಾಲೂಕಿನ ರಾಜಾಪುರ ಗ್ರಾಮದ ಪ್ರಗತಿಪರ ರೈತರಾದ ಶ್ರೀ.ರಾಮಚಂದ್ರ ಗುಂಡಪ್ಪಗೋಳ ಇವರ ಕ್ಷೇತ್ರದಲ್ಲಿ ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಸಮಗ್ರ ಕೃಷಿ ಪದ್ಧತಿ ತರಬೇತಿ ನೀಡಲಾಯಿತು. ಮತ್ತು ಶ್ರೀ. ಶಂಕರ ಬೆಳವಿ ರವರ ತೋಟದಲ್ಲಿ ಪಶು ಸಾಕಾಣಿಕೆಯ ಕ್ಷೇತ್ರ ಭೇಟಿ ಮಾಡಲಾಗಿದೆ**






**23.08.2017 ರಂದು ಗೋಕಾಕ ತಾಲೂಕಿನ ರಾಜಾಪುರ ಗ್ರಾಮದ ಪ್ರಗತಿಪರ ರೈತರಾದ ಶ್ರೀ.ರಾಮಚಂದ್ರ ಗುಂಡಪ್ಪಗೋಳ ಇವರ ಕ್ಷೇತ್ರದಲ್ಲಿ ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಸಮಗ್ರ ಕೃಷಿ ಪದ್ಧತಿ ತರಬೇತಿ ನೀಡಲಾಯಿತು. ಮತ್ತು ಶ್ರೀ. ಶಂಕರ ಬೆಳವಿ ರವರ ತೋಟದಲ್ಲಿ ಪಶು ಸಾಕಾಣಿಕೆಯ ಕ್ಷೇತ್ರ ಭೇಟಿ ಮಾಡಲಾಗಿದೆ.**





**13.01.2018 ರಂದು ಸಮಗ್ರ ಕೃಷಿ ತರಬೇತಿ ಕಾರ್ಯಕ್ರಮದಲ್ಲಿ ಮದವಾಲ ಗ್ರಾಮದ ರೈತರನ್ನು ಕರೆಸಿ ಮಾಹಿತಿ ನೀಡಲಾಗಿದೆ.**




**28.05.2018 ರಂದು ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಆಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ" ಯೋಜನೆ ಅಡಿಯಲ್ಲಿ ಮದವಾಲ ಗ್ರಾಮದ 25 ಜನ ಫಲಾನುಭವಿ ರೈತರಿಗೆ ಗೋಕಾಕ ತಾಲೂಕಿನ ಪಾಮಲದಿನ್ನಿ ಗ್ರಾಮದ ಪ್ರಗತಿಪರ ರೈತರ "ಸಮಗ್ರ ಕೃಷಿ ಪದ್ಧತಿ"ಯ ಕ್ಷೇತ್ರ ಭೇಟಿ ಮಾಡಿಸಲಾಯಿತು.**

**ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ:** ಈ ಯೋಜನೆ ತರಬೇತಿ ಪಡೆದ ನಂತರ ರೈತರು ಸಮಗ್ಗ ಕೃಷಿ ಪದ್ಧತಿಯನ್ನು ಹಂತ ಹಂತವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ.

| ಕ್ರ. ಸಂ. | ರೈತರ ಹೆಸರು | ಅಳವಡಿಸಿಕೊಂಡ ವಿವರ | ಸಂಖ್ಯೆ | ಖರೀದಿಸಿದ ಮೊತ್ತ | ಖರ್ಚು | ಮಾರಾಟದ ಅಂದಾಜು ಮೊತ್ತ | ಒಟ್ಟು ಆದಾಯ | ನಿವ್ವಳ ಆದಾಯ |
|---|---|---|---|---|---|---|---|---|
| 01 | ಸತೀಶ ಉದ್ದಾನಾಯಕ | ಆಡು ಸಾಕಾಣಿಕೆ | 06 | 3000 | 4000 | 7000 ರೂ. ಒಂದು ಆಡಿಗೆ | 42,000 | 38,000 |
| 02 | ಸತ್ತೆಪ್ಪಾ ನೇಗಿನಹಾಳ | ಕೋಳಿ ಸಾಕಾಣಿಕೆ | 30 | ಸರಕಾರಿ ಇಲಾಖೆಯಿಂದ ಉಚಿತವಾಗಿ ಪಡೆದಿರುತ್ತಾರೆ | 1000 | 200 ರೂ. ಒಂದು ಕೋಳಿಗೆ | 6,000 | 5,000 |

## “ಸಮಗ್ರ ಕೃಷಿ ಪದ್ಧತಿ” ಕುರಿತು ಅಂತಿಮ ರುಪುರೇಷೆ ನೀಡುವ ಸಭೆ:



**19.01.2018 ರಂದು ಫ್ಲಸ್ ಟ್ರಸ್ಟ್ ಸಂಸ್ಥೆಯ ಸಹಯೊಗದೊಂದಿಗೆ ನಡೆಸಿದ “ಸಮಗ್ರ ಕೃಷಿ ಪದ್ಧತಿ” ಕುರಿತು ಅಂತಿಮ ರುಪುರೇಷೆ ನೀಡುವ ಸಭೆಯಲ್ಲಿ ಭಾಗವಹಿಸಲಾಯಿತು**

**ಕೃಷಿಯಲ್ಲಿ ದೂರ ಶಿಕ್ಷಣ:** ಈ ಯೋಜನೆ ತರಬೇತಿ ಪಡೆದ ನಂತರ ರೈತರು ಸಾಮಾಜಿಕವಾಗಿ ಬದಲಾವಣೆ ಹೊಂದಿ ಕೃಷಿಯಲ್ಲಿ ದೂರ ಶಿಕ್ಷಣಕ್ಕೆ ನೊಂದಣಿ ಮಾಡಲು ಆಸಕ್ತಿ ಹೊಂದಿದ್ದಾರೆ.

